ಅ. ಸರ್ಕಾರಿ ಕೈಗಾರಿಕೆಗಳಲ್ಲಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಹರಿಜನ-ಗಿರಿಜನರಿಗೆ ಮೀಸಲಾತಿ ಪದ್ಧತಿಯನ್ನು ಅನುಸರಿಸಲು ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗುವುದೆ ? ಹಾಗಿದ್ದಲ್ಲಿ ಅದನ್ನು ಯಾವಾಗ ಹೊರಡಿಸಲಾಗುವುದು ?

ಸಚಿವರ ಪದನಾಮ.—ಶ್ರೀ ಎಸ್. ಆರ್. ಬೊಮ್ಮಾಯಿ, ಕೈಗಾರಿಕಾ ಮಂತ್ರಿಗಳು.—

ಉತ್ತರಗಳು :

ಅ. ದಿನಾಂಕ 6-1-83 ರಂದು ಒಂದು ಆದೇಶವನ್ನು ಹೊರಡಿಸಿ ದೊಡ್ಡ ಮತ್ತು ಮಧ್ಯಮ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಉದ್ದಿಮೆಗಳಲ್ಲಿ ಜನರಿಗೆ ಉದ್ಯೋಗ ಕೊಡುವಂತೆ ಕೋರ ಲಾಗಿದೆ.

ಆ. ಸರ್ಕಾರಿ ಆದೇಶ ದಿನಾಂಕ 3-5-75ರ ಪ್ರಕಾರ ಎಲ್ಲಾ ಸರ್ಕಾರಿ ಉದ್ದಿಮೆಗಳಲ್ಲಿ ಸರ್ಕಾರಿ ನಿಯಮಾವಳಿ ಪ್ರಕಾರ ಹರಿಜನ ಗಿರಿಜನ ವರ್ಗದವರಿಗೆ ಮೀಸಲಾತಿಯನ್ನು ನೀಡಲಾಗು ತ್ತಿದೆ.

ವಿಷಯ:- ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ನೇಮಕಾತಿಯ ಬಗ್ಗೆ.

ಪ್ರ. 621 (1670) ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;

ಅ. ನ್ಯಾಯಾಧೀಶರು ಅಥವಾ ಪೀಠಾಸೀನ ಅಧಿಕಾರಿಗಳು ಇಲ್ಲದಿರುವ ನ್ಯಾಯಾಲಯಗಳ ಸಂಖ್ಯೆ ಎಷ್ಟು ;

ಆ. ಅಂಥ ನ್ಯಾಯಾಲಯಗಳಿಗೆ ನ್ಯಾಯಾಧೀಶರನ್ನು ನೇಮಕ ಮಾಡದಿರುವುದಕ್ಕೆ ಕಾರಣಗ ಳೇನು ;

ಇ. ನ್ಯಾಯಾಲಯಗಳು ಖಾಲಿ ಇರುವುದರ ಪ್ರಯುಕ್ತ ಸಾರ್ವಜನಿಕ ಹಿತಕ್ಕೆ ಬಾಧೆಯುಂಟಾಗು ವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಡಿಸೆಂಬರ್ 1982 ರಿಂದ ಖಾಲಿ ಇರುವ ನ್ಯಾಯಾಲಯಗಳಲ್ಲಿನ ಇತರ ಸಿಬ್ಬಂದಿಗಾಗಿ ತಗುಲಿದ ವೆಚ್ಚವೆಷ್ಟು ?

ಈ. ನ್ಯಾಯಾಲಯಗಳಲ್ಲಿನ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಸತಿ ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆಯ ಸಚಿವರು).—

ಅ. (i) ಜಿಲ್ಲಾ ನ್ಯಾಯಾಧೀಶರು — 2
(ii) ಸಿವಿಲ್ ನ್ಯಾಯಾಧೀಶರು — 6
(iii) ಮುನ್ಸೀಫರು — 10

ಆ. ಅಧಿಕಾರಿಗಳು ಲಭ್ಯವಿಲ್ಲದಿರುವುದರಿಂದ

ಇ. ಹೌದು. ವಾಸ್ತವಿಕ ವೆಚ್ಚದ ವಿವರಗಳನ್ನು ಸಂಗ್ರಹಿಸಲು ಸಮಯದ ಅಗತ್ಯವಿದೆ.

ಈ. ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಸರ್ಕಾರವು ಉಚ್ಚ ನ್ಯಾಯಾಲಯಕ್ಕೆ ವಿನಂತಿಸಿದೆ. ಉಚ್ಚ ನ್ಯಾಯಾಲಯವು, ಜಿಲ್ಲಾ ನ್ಯಾಯಾಧೀಶರ ಮತ್ತು ಮುನ್ಸೀಫರ ಹುದ್ದೆಗಳಿಗೆ ನೇಮಕ ಮಾಡಲು ಅರ್ಜಿಗಳನ್ನು ಕರೆದಿದೆ.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನನ್ನ (ಎ) ಪ್ರಶ್ನೆಗೆ ಉತ್ತರ ವಾಗಿ ಸುಮಾರು 10 ಜನ ಮುನ್ಸಿಫರ ಹುದ್ದೆಗಳು ಖಾಲಿ ಇವೆಯೆಂದು ಹೇಳಿದ್ದಾರೆ. ಸರ್ಕಾರದವರು ಘೋಷಣೆ ಮಾಡಿರುವ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಒಂದು ಮುನ್ಸೀಫ್ ಮ್ಯಾಜಿ ಸ್ಟ್ರೇಟ್ ನ್ಯಾಯಾಲಯವನ್ನು ಸ್ಥಾಪನೆ ಮಾಡಬೇಕು. ಎಷ್ಟು ತಾಲ್ಲೂಕುಗಳಲ್ಲಿ ಈ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಇಲ್ಲ. ಒಂದು ವೇಳೆ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ

ಗಳು ಇದ್ದರೂ ಸಹ ಅಲ್ಲಿಗೆ ನ್ಯಾಯಾಧೀಶರು ಹೋಗುವುದಿಲ್ಲ. ಇದಕ್ಕೆ ಕಾರಣವಾದರೂ ಏನೆಂದರೆ ಅಲ್ಲಿ ಅವರಿಗೆ ವಾಸದ ಮನೆಗಳು ಸಿಗುವುದಿಲ್ಲ. ಆದ್ದರಿಂದ ಅವರಿಗೆ ಸರ್ಕಾರದ ವತಿಯಿಂದ ಏನಾದರೂ ವಸತಿ ಸೌಕರ್ಯವನ್ನು ಕಲ್ಪಿಸಿಕೊಡುವರೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸುಮಾರು 175 ತಾಲ್ಲೂಕುಗಳಲ್ಲಿ ಸುಮಾರು 37 ತಾಲ್ಲೂಕುಗಳಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಇಲ್ಲ. ಈ 37 ತಾಲ್ಲೂಕುಗಳಲ್ಲಿ ಕೂಡ ಹಂತ ಹಂತವಾಗಿ ನಾವು ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳನ್ನು ತೆರೆಯುವ ವ್ಯವಸ್ಥೆಯನ್ನು ಮಾಡುತ್ತೇವೆ. ಮತ್ತೆ ಮಾನ್ಯ ಸದಸ್ಯರು ಮಾತನಾಡುವಾಗ ಮುನ್ಸೀಫ್‌ರಿಗೆ ವಾಸ ಮಾಡಲು ಸರಿಯಾದ ಮನೆಗಳು ಹಳ್ಳಿಯಲ್ಲಿ ಸಿಗುವುದಿಲ್ಲವೆಂದು ಹೇಳಿದರು. ಆದರೆ ನಾನು ಆ ಬಗ್ಗೆ ಅನೇಕ ಸಾರಿ ಈ ಸದನದಲ್ಲಿ ಉತ್ತರ ಕೊಡುತ್ತಾ ಹೇಳಿದ್ದೇನೆ ಎಲ್ಲೆಲ್ಲಿ ಸರ್ಕಾರದ ವಾಸದ ಮನೆಗಳು ಇರುವುದಿಲ್ಲವೋ ಅಂಥ ಕಡೆಗಳಲ್ಲಿ ಅವರು ಬಾಡಿಗೆ ಮನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅವರ ಸಂಬಳದಿಂದ ಮುರಿದು ಕೊಳ್ಳತಕ್ಕಂಥ ಬಾಡಿಗೆ ಗಿಂತ ದುಬಾರಿ ಬಾಡಿಗೆಯಾದರೆ ಆ ಬಾಡಿಗೆಯನ್ನು ಸರ್ಕಾರದವರು ಕೊಡಬೇಕೆಂದು ಸಹ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಆದು ಈಗಾಗಲೇ ಜಾರಿಗೆ ಬಂದಿದೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಇವೊತ್ತಿನ ದಿವಸ ನ್ಯಾಯಾಧೀಶರಾಗಿ ಅಥವಾ ಮುನ್ಸೀಫ್‌ರಾಗಿ ಬರುವುದಕ್ಕೆ ಯಾರೂ ಕೂಡ ಇಚ್ಚೆಪಡುತ್ತಿಲ್ಲ. ಕಾರಣವಾದರೂ ಏನೆಂದರೆ ಅವರಿಗೆ ಸರ್ಕಾರದವರು ಒದಗಿಸಿಕೊಡುತ್ತಿರುವ ಸೌಲಭ್ಯಗಳು ಬಹಳ ಕಡಿಮೆ. ಸ್ವಾಮಿ ಮೊನ್ನೆಯ ದಿವಸ ಡಿಸ್ಟ್ರಿಕ್ಟ್ ಜಡ್ಜ್ ಹುದ್ದೆಗೆ ಸಂದರ್ಶನ ಮಾಡಿದಾಗ ಸುಮಾರು ಎರಡು ಮೂರು ಜನ ಮಾತ್ರ ಹಾಜರಿದ್ದರು. ಆದರೆ ಈ ಹುದ್ದೆಗಳಿಗೆ ಯಾರೂ ಮುಂದೆ ಬರುವುದಿಲ್ಲ. ಆದ್ದರಿಂದ ಸರ್ಕಾರದವರು ಇವರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಇದಕ್ಕೆ ಹೈಕೋರ್ಟಿನವರು ಉತ್ತರ ಕೊಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ಯಾರೇ ಒಬ್ಬ ವಕೀಲರು ಸ್ವಂತವಾಗಿ ಪ್ರಾಕ್ಟೀಸ್ ಮಾಡುವಾಗ ಅವರಿಗೆ ಹೆಚ್ಚು ಆದಾಯವಿರತ್ತದೆ. ಆದ್ದರಿಂದ ಅವರು ಸರ್ಕಾರದ ಸೇವೆಯನ್ನು ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಎಲ್ಲಾ ವಕೀಲರುಗಳು ಸರ್ಕಾರಿ ಸೇವೆಯನ್ನು ಮಾಡುವುದಕ್ಕೆ ಮುಂದೆ ಬಂದರೆ ಈ ತೊಂದರೆ ಇರುವುದಿಲ್ಲ. ಅವರು ಅವರ ಆದಾಯವನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳುವುದಕ್ಕೆ ಮನಸ್ಸು ಮಾಡಿದರೆ ಒಳ್ಳೆಯದು.

ವಿಷಯ:– ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜನತಾ ಹಾಗೂ ಹುಡ್ಕೋ ಮನೆಗಳ ಬಗ್ಗೆ.

ಪ್ರ. 622 (1359) ಶ್ರೀ ವಸಂತ. ವಿ. ಸಾಲ್ಯಾನ (ಕಾಪು).—ಮಾನ್ಯ ವಸತಿ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ;

ಅ. 1983–84 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸರಕಾರದವರ ವತಿಯಿಂದ ಜನತಾ ಮತ್ತು ಹುಡ್ಕೋ ಮನೆಗಳನ್ನು ಮಂಜೂರು ಮಾಡಲಾಗಿದೆಯೇ ;

ಆ. ಹಾಗಿದ್ದಲ್ಲಿ ಮಂಜೂರು ಮಾಡಿದ ಮನೆಗಳ ಸಂಖ್ಯೆ ಎಷ್ಟು ;

ಇ. ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ;

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ವಸತಿ ಮಂತ್ರಿಗಳು).—

ಅ. 1982–83ನೇ ಸಾಲಿನಲ್ಲಿ ಒಟ್ಟು 4500 ಮನೆಗಳನ್ನು ಕನ್ನಡ ಜಿಲ್ಲೆಗೆ ಮಂಜೂರು ಮಾಡಿದ್ದು ಅವುಗಳಲ್ಲಿ ಒಂದೂ ಮನೆಗಳನ್ನು ಆಯವ್ಯಯ ಪಟ್ಟಿಯಲ್ಲಿ ಹಣವಿಲ್ಲದ ಕಾರಣ ಕಟ್ಟಲು ತೆಗೆದುಕೊಳ್ಳದಿದ್ದುದರಿಂದ 1983–84ನೇ ಸಾಲಿನಲ್ಲಿ ಈ ಪೈಕಿ 2185 ಮನೆಗಳನ್ನು ಕಟ್ಟಲು ತೆಗೆದುಕೊಳ್ಳಲಾಯಿತು.–

ಆ. ಮೇಲಿನ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ.